# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 194/2021

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಸಾಕ್ಷಿದಾರರ ಹೆಸರು : ಶಂಭುಲಿಂಗಪ್ಪ

ತಂದೆಯ ಹೆಸರು : ಹೆಗ್ಗಪ್ಪರ ಗುಡ್ಡಪ್ಪ

ವಯಸ್ಸು : 45 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 03.10.2024

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ರಾಗಿಮಸಲವಾಡ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ದಿನಾಂಕ 24.11.2020 ರಂದು ಗ್ರಾಮ ಲೆಕ್ಕಾಧಿಕಾರಿ ಕಚೇರಿಗೆ ಉಪ ತಹಶೀಲ್ದಾರ ರವರು ಬಂದಿದು ರಾಜಪ್ಪ ಗ್ರಾಮ ಲೆಕ್ಕಾಧಿಕಾರಿ ರಾಮಣ್ಣ ಸುರೇಶ ಚಾ ಸಾ 13 ರಿಂದ 16 ರವರು ಬಂದಿದ್ದರು. ನಿನ್ನ ಮೇಲೆ ದೂರು ಇದೆ ಬನ್ನಿ ಅಂತಾ ಕರೆದಿರುತ್ತಾರೆ. ಆ ದಿನ ನಾನು ಮತ್ತು ಸಿದ್ದಪ್ಪ ಕಚೇರಿಗೆ ಹೋಗಿ ಅರ್ಜಿ ಬಗ್ಗೆ ವಿಚಾರಣೆ ಮಾಡಿರುತ್ತೇವೆ. ಆಗ ಚಿನ್ನಪ್ಪರ ಹನುಮಂತಪ್ಪ ಎನ್ನುವವರು ಪೂಜಾರ ಸಿದ್ದಪ್ಪನಿಗೆ ಅವಾಚ್ಯಶಬ್ದಗಳಿಂದ ಬೈದಿರುತ್ತಾರೆ. ಏಕೆ ಅವಾಚ್ಯವಾಗಿ ಬೈಯುತ್ತಿರಿ ಅಂತಾ ಕೇಳಿದಾಗ ನಾಗರಾಜ, ರಾಮನಗೌಡ, ಪಂಚನಗೌಡ, ಕಿರಣ ಗೌಡ, ದೇವರಾಜ ಗೌಡ, ಪರಗಟ್ಟಿ ಶಿವಕುಮಾರ, ಕೊಟ್ರಗೌಡ, ಶಶಿ, ಕೊಟ್ರೇಶ್ ತಂದೆ ದ್ಯಾಮಪ್ಪ ಎಲ್ಲರೂ ಅಕ್ರಮ ಗುಂಪನ್ನು ಕಟ್ಟಿಕೊಂಡು ನನಗೆ ಅವಾಚ್ಯಶಬ್ದಗಳಿಂದ ಬೈದು ಮಿಂಡ್ರಿ ಮಗನೇ ನಿನ್ನ ಹೆಂಡತಿನ ಹಡಾ ಅಂತಾ ಬೈದಿರುತ್ತಾರೆ. ಇದಕ್ಕಿಂತ ಪೂರ್ವದಲ್ಲಿ ಒಂದು ಅರ್ಜಿ ಕೊಟ್ಟಿದ್ದೆ. ಆಂಜನೇಯ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿರುತ್ತದೆ. ದೇವಸ್ಥಾನಕ್ಕೆ ಸೇರಿದ ನಗದು, ನಾಣ್ಯ, ಬೆಳ್ಳಿ ಎಲ್ಲವನ್ನು ಶೇಖರಗೌಡ ಮತ್ತು ಕರೆಗೌಡ ತಮ್ಮ ವಶದಲ್ಲಿ ಇಟ್ಟುಕೊಂಡಿದ್ದರು. ಅದನ್ನು ಪ್ರಶ್ನಿಸಿ ಡಿ ಸಿ ರವರಿಗೆ ವಶಕ್ಕೆ ತೆಗೆದುಕೊಳ್ಳುವಂತೆ ಮನವಿ ಕೊಟ್ಟಿದ್ದೆ. ಸದರಿ ಅರ್ಜಿ ವಿಚಾರಣೆಗಾಗಿ ಉಪ ತಹಶಿಲ್ದಾರ, ವಿ ಐ, ಆರ್ ಐ ರವರುಗಳು ಸ್ಥಳಕ್ಕೆ ಬಂದಿದ್ದರು. ನಮ್ಮ ವಿರುದ್ದ ದೂರು ಕೊಡುತ್ತೀಯಾ ಅಂತಾ ಹಲ್ಲೆ ಮಾಡಿರುತ್ತಾರೆ.

ಸಿ ಸಿ ನಂಬರ 194/2021

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಆರೋಪಿತರು ಅಕ್ರಮ ಗುಂಪನ್ನು ಕಟ್ಟಿಕೊಂಡು ತಲೆಗೆ ಹಲ್ಲೆ ಮಾಡಿರುತ್ತಾರೆ. ನನ್ನ ಎರಡು ಕಿವಿ, ಹೊಟ್ಟೆ ಕೈ ಕಾಲುಗಳಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ. ಕಚೇರಿಯಿಂದ ನನ್ನ ಕೊರಳ ಪಟ್ಟಿ ಹಿಡಿದು ಕರೆಗೌಡರು ಎಳೆದುಕೊಂಡು ಬಂದಿರುತ್ತಾರೆ. ಜೀವ ಬೆದರಿಕೆ ಹಾಕಿರುತ್ತಾರೆ. ನನ್ನ ಕೊರಳಲ್ಲಿ ಇತದ್ದ ಬ್ರಾಸ್  ಲೈಟ್ ಚೈನ್ ತೆಗೆದುಕೊಂಡಿರುತ್ತಾರೆ. ಆ ಸಮಯದಲ್ಲಿ ನಾಗರಾಜ ವಿಡಿಯೋ ಮಾಡುತ್ತಿದ್ದು ಆತನ ಮೊಬೈಲನ್ನು ಶಶಿ ತೆಗೆದುಕೊಂಡಿರುತ್ತಾರೆ, ಜೇಬಿ ನಲ್ಲಿ ಇದ್ದ 2 ಸಾವಿರ ರೂ ಕೂಡ ತೆಗೆದುಕೊಂಡಿರುತ್ತಾರೆ. ಆರೋಪಿತರು ನನಗೂ ಮತ್ತು ಚಾ ಸಾ 4 ರವರಿಗೆ ಆರೋಪಿತರೆಲ್ಲರೂ ಹೊಡೆದಿರುತ್ತಾರೆ. ನಮಗೆ ಅವಾಚ್ಯ ಶಬ್ದಬಳಿಂದ ಹೊಡೆದಿರುತ್ತಾರೆ. ಜೀವ ಬೆದರಿಕೆ ಹಾಕಿರುತ್ತಾರೆ. ವೀರೇಶ ಮತ್ತು ಚಿಕ್ಕಣ್ಣಗೌಡ ಜಗಳ ಬಿಡಿಸಿರುತ್ತಾರೆ. ನನ್ನನ್ನು ಜಿಲ್ಲಾ ಆಸ್ಪತ್ರೆ ದಾವಣಗೆರೆಗೆ ಕಳುಹಿಸಿರುತ್ತಾರೆ. ನಂತರ ಆಸ್ಪತ್ರೆಯಿಂದ ಊರಿಗೆ ಬಂದು ವಿಚಾರ ಮಾಡಿ ದಿನಾಂಕ 28.11.2020 ರಂದು ದೂರು ಕೊಟ್ಟಿರುತ್ತೇನೆ. ಮಾರನೇ ದಿನ ಪೋಲೀಸರು ಚಾ ಸಾ 2 ಮತ್ತು 3 ರವರ ಸಮಕ್ಷಮ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ನಾನು ಸಹಿ ಕೂಡ ಮಾಡಿರುತ್ತೇನೆ. ಒಂದು ಸಿ ಡಿ ಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಕಾಂಪೌಂಡಿನ ಅಳತೆ ಮಾಡಿರುತ್ತಾರೆ. ಸ್ಥಳದಲ್ಲಿ ಒಂದು ಸ್ಕೆಚ್ ಕೂಡ ತಯಾರಿಸಿರುತ್ತಾರೆ. ನಾನು ಕೊಟ್ಟ ದೂರು ನೋಡುತ್ತಿದ್ದು ಅದನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ನೋಡುತ್ತಿದ್ದು ಅದನ್ನು ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿ ಪಿ 2 (ಎ) ಎಂದು ಗುರುತಿಸಲಾಯಿತು. ನಕಾಶೆ  ನಿ ಪಿ 3 ಎಂದು, ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು

ಸಿ ಸಿ ನಂಬರ 194/2021

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಗುರುತಿಸಲಾಯಿತು. ಸಿ ಡಿ ಯನ್ನು ಮು ಮಾ 1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರುಗಳು ನನಗೆ ಹಲ್ಲೆ ಮಾಡಿದ ಆರೋಪಿತರುಗಳು ಇರುತ್ತಾರೆ.

**(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.